# ಅಪೊಸ್ತಲರ ಕೃತ್ಯಗಳು:
# ಕ್ರಿಯೆಗಾಗಿ ಒಂದು ಕರೆ

ಅಪೊಸ್ತಲರ ಕೃತ್ಯಗಳು, ಎಂಬ ಪುಸ್ತಕದಲ್ಲಿ ಒಂದು ಚಲನಾತ್ಮಕದ ಸಂಕಲನವನ್ನು ಕಾಣುತ್ತೇವೆ! ಈ ಅಪೊಸ್ತಲರ ಕೃತ್ಯಗಳ ಪುಸ್ತಕವು ಪ್ರತಿಯೊಬ್ಬನಿಗೂ, ಅಂದರೆ ಯೇಸುವಿನ ಅನುಯಾಯಿಗಳು, ಆತನಿಗಾಗಿ ತಮ್ಮನ್ನು ತೊಡಗಿಸಿಕೊಳ್ಳುವ ಪ್ರಕ್ರಿಯೆಗೆ ಒಂದು ತುರ್ತಾದ ಕರೆಯಾಗಿದೆ. ಅಪೊಸ್ತಲರು ಪವಿತ್ರಾತ್ಮ ಭರಿತರಾಗಿ, ಅವರ ಕರ್ತನು ಅವರಿಗೆ ಯಾವ ಕಾರ್ಯವನ್ನು ನಿರ್ವಹಿಸಿದ್ದಾನೋ, ಮತ್ತು ಯಾವುದಕ್ಕಾಗಿ ಅವರನ್ನು ತರಬೇತುಗೊಳಿಸಿದ್ದನೋ, ಅದನ್ನು ಅಪೊಸ್ತಲರು ಈಡೇರಿಸಿದ ಕಾರ್ಯವನ್ನೇ ಅಪೊಸ್ತಲರ ಕೃತ್ಯದಲ್ಲಿ ನೋಡುತ್ತೇವೆ. ಒಬ್ಬನು ಅಪೊಸ್ತಲರ ಕೃತ್ಯವನ್ನು ಓದಿಯೂ, ಕರ್ತನಾದ ಯೇಸು ಕ್ರಿಸ್ತನ ಸುವಾರ್ತೆಯ ಪರವಾಗಿ ಕಾರ್ಯ ನಿರ್ವಹಿಸದಿದ್ದರೆ, ಅವನು ತುರ್ತಾದ ಕರೆಯನ್ನು ಕಳಕೊಂಡವನಾಗಿರುತ್ತಾನೆ!

## ವಾಗ್ದಾನ ಭರಿತವಾದ ಕ್ರಿಯೆ

ಯೇಸು, ತನ್ನ ಅಪೊಸ್ತಲರಿಗೆ ಕೆಲವು ಜವಾಬ್ದಾರಿಗಳನ್ನು ನೀಡಿದ್ದನು. (ನೋಡಿರಿ ಮತ್ತಾಯ 28:18-20; ಮಾರ್ಕ 16:15, 16; ಲೂಕ 24:44-47.) ಹಾಗೂ ಮುಂದೆ ಬರಲಿದ್ದ ವಾಗ್ದಾನದ ಹಾಗೂ ಸಂತೈಸುವ ಪವಿತ್ರಾತ್ಮನ ಕುರಿತಾಗಿಯೂ ತಿಳಿಸಿದ್ದನು (ಯೋಹಾನ 16:7-14). ನಂತರ ಆತನು ಪರಲೋಕದ ಮಹಿಮೆಗೆ ಒಯ್ಯಲ್ಪಟ್ಟನು (ಅಪೊಸ್ತಲರ ಕೃತ್ಯಗಳು 1:9-11). ತಕ್ಷಣವೇ ಯೇಸು ಕ್ರಿಸ್ತನು ಪವಿತ್ರಾತ್ಮನ ಕುರಿತು ವಾಗ್ದಾನ ಮಾಡಿದಂತೆಯೇ ಆ ಪವಿತ್ರಾತ್ಮವನ್ನು ಪಡೆದ ಹನ್ನೆರಡು ಮಂದಿ (ಅಪೊಸ್ತಲರ ಕೃತ್ಯಗಳು 2:1-4), ಅಪೊಸ್ತಲರು ತಡಮಾಡದೆ ಹೊರಟು ಹೋಗಿ ವಿವಿಧ ಭಾಷೆಗಳನ್ನಾಡುವ ಹಾಗೂ ವಿವಿಧ ಪ್ರದೇಶಗಳಿಂದ ಯೆರೂಸಲೇಮಿನಲ್ಲಿ ಪಂಚಾಶತ್ತಮ ಹಬ್ಬಕ್ಕಾಗಿ ಬಂದಿದ್ದ ಜನರಿಗೆ ಸುವಾರ್ತೆಯನ್ನು ಸಾರಿದರು. ಆ ಸಂದರ್ಭದಲ್ಲಿ ದೊಡ್ಡದಾದ ಗುಂಪು ಯೇಸುವಿನ ಸುವಾರ್ತೆಗೆ ಪರಿವರ್ತನೆಗೊಂಡರು. ಅಪೊಸ್ತಲರು ಯೇಸುವಿನ ಚಿತ್ತವನ್ನು ಮುಂದುವರಿಸುವಲ್ಲಿ ಕ್ರಿಯಾಶೀಲರಾಗಿದ್ದರಿಂದ, ಈ ಕಾರ್ಯವು ಉಂಟಾಯಿತು (ಅಪೊಸ್ತಲರ ಕೃತ್ಯಗಳು 2:4, 14, 40, 42).

## ಕ್ರಿಯೆಯ ಒಂದು ಚಿತ್ರಣ

ಅಪೊಸ್ತಲರ ಕ್ರಿಯೆಯ ಮುಖಾಂತರ ದೇವರು ಲೋಕದ ಜನರಿಗೆ ಭಲವನ್ನು ನೀಡಿದ ನಂತರ, ಅವರಲ್ಲಿ ಆಸಕ್ತಿಯ ಪ್ರತಿಕ್ರಿಯೆ ಉಂಟಾಯಿತು (ಅಪೊಸ್ತಲರ ಕೃತ್ಯಗಳು 4:33; ಎಫೆಸ 2:8, 9; ತೀತ 2:10, 11). ಸುವಾರ್ತೆಗೆ ಪರಿವರ್ತನೆಗೊಂಡವರು, ತಕ್ಷಣವೇ ಶ್ರದ್ಧೆಯುಳ್ಳ ಕಾರ್ಯಕರ್ತರಾದರು, ಹಿಂಸೆಯ ನಡುವೆಯು, ಪ್ರತಿಯೊಬ್ಬ ಕ್ರೈಸ್ತನು ತಾನು ಸುವಾರ್ತೆಗೆ ಸಾಕ್ಷಿಯಾಗಿರಬೇಕೆಂದು ಗ್ರಹಿಸಿಕೊಂಡನು (ಅಪೊಸ್ತಲರ ಕೃತಗಳು 8:4). ಅಪೊಸ್ತಲರ ಹಾಗೂ ಹೊಸದಾಗಿ ಪರಿವರ್ತನೆಗೊಂಡವರ ಭಲವಳ್ಳ ಸೇವೆಯ ಕಾರಣದಿಂದ, ಸಭೆಗಳು ಸ್ಥಾಪನೆಗೊಂಡವು.

ಈ ಅವಧಿಯಲ್ಲಿನ, ಅಪೊಸ್ತಲರ ಕೃತ್ಯಗಳ ಇತಿಹಾಸವನ್ನು ವಿಧೇಯತೆಯೂ ಹಾಗೆ ಕೃಪೆಯ ಕರೆ ಎಂದು ಪ್ರತಿಯೊಬ್ಬರು ಅರಿತುಕೊಳ್ಳಬೇಕು. ಮೊದಲ ಮೂವತ್ತು ವರ್ಷಗಳ ಅಂತರದಲ್ಲಿ ಯಾವ ವಿಧದಲ್ಲಿ ಕೃಪೆಯನ್ನು ನೀಡಲಾಯಿತು ಹಾಗೂ ಅದನ್ನು ಸ್ವೀಕರಿಸಿದ

ಕುರಿತು ಇದು ಒಂದು ದಾಖಲೆಯಾಗಿರುತ್ತದೆ - ಇದು ಇತಿಹಾಸದ ಪುಸ್ತಕವಾಗಿದೆ - ಕ್ರಿಸ್ತನಿಗಾಗಿ, ಕ್ರೈಸ್ತರು ಹೇಗೆ ಕ್ರಿಯಾಶೀಲರಾದರು, ದೇವರ ಕೃಪೆಯನ್ನು ಹೊಂದಿದವರಿಗೆ ಅಪೊಸ್ತಲರು ಹೇಗೆ ಉಪದೇಶಮಾಡಿದರು ಎಂಬ ಇತಿಹಾಸವಿದೆ. ಇದೇ ಲೋಕವನ್ನೇ ಸುವಾರ್ತಮಯವಾಗಿ ಮಾಡುವಂಥ ಹೃದಯದ ಅಭಿಲಾಷೆಯ ಇತಿಹಾಸವಾಗಿದೆ.

ಮೂಲತಹ ಈ ಪುಸ್ತಕದ ವಿನ್ಯಾಸವು ಕ್ರಿಸ್ತನ ಮರಣದ ಉದ್ದೇಶವನ್ನು ಆತನ ಕಾರ್ಯವನ್ನು ಸಾಭೀತು ಪಡಿಸಿದ ಪುಸ್ತಕವಾಗಿದೆ. ಇಲ್ಲವಾದರೆ, ಏಕೆ ಆ ಪ್ರಸಂಗಿಗಳು ದಾಖಲಾಗುತ್ತಿದ್ದವು? ಪರಿವರ್ತನೆಗೊಂಡ ಘಟನೆಗಳ ಬಗ್ಗೆ ಏಕೆ ವಿವರವಾಗಿ ದಾಖಲು ಮಾಡಲಾಗಿದೆ? ಅಪೊಸ್ತಲರ ಸುವಾರ್ತಾ ಕಾರ್ಯವನ್ನು ಲೂಕನು ಏಕೆ ಕೂಲಂಕುಷವಾಗಿ ಪರಿಶೀಲನೆ ಮಾಡಿದನು?

ಅಪೊಸ್ತಲರ ಕೃತ್ಯಗಳು ಪುಸ್ತಕವು ಒಬ್ಬನ ಕ್ರಿಸ್ತನ ಅನ್ಯೋನ್ಯತೆಯ ಸಂಬಂಧಕ್ಕೆ ಹೇಗೆ ಬರಬಹುದು ಎಂಬ ವಿನ್ಯಾಸವನ್ನು ತೋರಿಸುವ ಚಿತ್ರಣದ ಪುಸ್ತಕವಾಗಿದೆ. ಅಪೊಸ್ತಲರ ಪುಸ್ತಕವು ದೇವರ ಪ್ರೀತಿಯ ಪ್ರಕಟನೆಯ ಪುಸ್ತಕವಾಗಿದೆ ದೇವರ ಚಿತ್ತಕ್ಕೆ ಒಳಗಾಗುವವರಿಗೆ ದೊರೆಯುವ ದೇವರ ಕ್ಷಮಾಪಣೆಯ ಅಂತಿಮವಾದ ದಾಖಲಾತಿಯಾಗಿದೆ. ಪರಲೋಕದ ದೇವರನ್ನು ಪ್ರತಿಯೊಬ್ಬರು ಮೆಚ್ಚಿಸುವ ಕ್ರಿಯೆಯ ಸತ್ಯವನ್ನು ತೋರುತ್ತದೆ.

ಭಯ ಹಾಗೂ ಅನೇಕ ಹಿಂಸೆಗಳ ನಡುವೆಯು, ಅಪೊಸ್ತಲರು, "ಉಪದೇಶ ಮಾಡುತ್ತಾ ಕ್ರಿಸ್ತನಾದ ಯೇಸುವಿನ ವಿಷಯವಾದ ಶುಭವರ್ತಮಾನವನ್ನು ಸಾರುತ್ತಾ ಇದ್ದರು" (ಅಪೊಸ್ತಲರ ಕೃತ್ಯಗಳು 5:42). ಅವರು ಸಭೆಗೆ ಒಂದು ದೊಡ್ಡ ಜವಾಬ್ದಾರಿ ಇದೆ ಎಂದು ಅರಿತರು: ನಾಶವಾಗುವವರಿಗೆ ಶುಭಸಮಾಚಾರವನ್ನು ಪ್ರಸಂಗಿಸುವದು ಹಾಗೂ ಉಪದೇಶಿಸುವದ್ದನ್ನೇ ಸಭೆಯ ಸ್ಥಿರತೆಗೆ ಬೇರೆ ಯಾವ ಕಾರಣಗಳನ್ನು ನೀಡಲಾಗಿರುವದಿಲ್ಲ.

ಅಪೊಸ್ತಲರು ಪ್ರಸಂಗಿಸುವ ವಿಚಾರದಲ್ಲಿ ಜೀವಿಸುವವರೂ ಹಾಗೂ ಅದನ್ನೆ ಉಸಿರಾಗಿ ಮಾಡಿಕೊಂಡಿದ್ದ "ಸಾರುವ ಯಂತ್ರಗಳಾಗಿದ್ದರು" ಯೇಸು ಅವರಿಗೆ ತರಬೇತಿ ನೀಡಿದಂತೆ, ಯೇಸುವಿಗಾಗಿ ಅವರು ತಮ್ಮನು ಯಜ್ಞವೇದಿಯ ಮೇಲೆ ಯಜ್ಞವನ್ನಾಗಿ ಸಮರ್ಪಿಸಿ, ಯೇಸುವಿನ ಉದ್ದೇಶಕ್ಕಾಗಿಯೇ ಶ್ರಮಪಟ್ಟರು, ಅದಕ್ಕಾಗಿಯೇ ಕರ್ತನು ಅವರಿಗೆ ಆತ್ಮನ ಬಲವನ್ನು, ತನ್ನ ಕಾರ್ಯವನ್ನು ಈಡೇರಿಸಿಕೊಂಡನು. ಸಭೆಯ ಸದಸ್ಯರುಗಳು ಅಪೊಸ್ತಲರ ಕೃತ್ಯಗಳು ಪುಸ್ತಕವನ್ನು ಸರಿಯಾಗಿ ಓದುವದಾದರೆ, ಅದರ ಅರ್ಥವನ್ನು ಅರಿಯುವುದಾದರೆ, ಪರಿವರ್ತನೆಯ ಕಥೆಯನ್ನು ಸರಿಯಾಗಿ ಬಳಸಿದರೆ, ದೇವರು ತನ್ನ ಕಾರ್ಯವನ್ನು ಮುಂದುವರಿಸಲು ಅವರನ್ನೇ ಅವಲಂಭಿಸಿರುವನೆಂದು ತಿಳಿದರೆ, ಕ್ರೈಸ್ತರ ಈ ದಿನದ ಕ್ರಿಯೆಗಳು ಆತ್ಮೀಕ ಅಪರಾಧ ಎಂದಾಗುತ್ತದೆ.

## ಕ್ರಿಯೆಯ ಮಂಡನೆ

ಈ ಪುಸ್ತಕದಲ್ಲಿ ಕ್ರಿಯೆಯ ಸರಪಣಿಯ ಮೂಲಕ ಹಾದು ಬಂದಂತೆ, ಮತ್ತು ಅವುಗಳು ಆ ದಿನಗಳಲ್ಲಿ ನಿದರ್ಶನಗಳಾಗಿದ್ದೂ - ಈ ದಿನಗಳ ರಕ್ಷಣೆಗೂ ಅವುಗಳು ಅನ್ವಯಿಸುತ್ತವೆ. (1) ಸತ್ಯವನ್ನು ಅರಿತವರುಗಳು, ಹಾಗೂ ಅಪೊಸ್ತಲರುಗಳು, ಇತರರಿಗೆ ಉಪದೇಶಮಾಡಿದರು; (2) ಸುವಾರ್ತೆಯನ್ನು ಸ್ವೀಕರಿಸಿದವರು, ಅದರ ಸತ್ಯಗಳನ್ನು ಅರಿತು ಅದನ್ನು ನಂಬಿದರು; (3) ನಂಬಿದವರು, ಪಾಪದ ಮಾನಸಾಂತರವನ್ನು ಹೊಂದಿದರು; (4) ಮಾನಸಾಂತರ ಹೊಂದಿದ ವಿಶ್ವಾಸಿಗಳು ಕ್ರಿಸ್ತ ಯೇಸುವಿನಲ್ಲಿ ತಮ್ಮ ವಿಶ್ವಾಸವನ್ನು ಅರಿಕೆ ಮಾಡಿದರು; (5) ಅರಿಕೆ ಮಾಡಿ ಮಾನಸಾಂತರಗೊಂಡವರು ಕ್ರಿಸ್ತನಲ್ಲಿ ದೀಕ್ಷಾಸ್ನಾನ ಹೊಂದಿದರು; ಮತ್ತು (6) ದೀಕ್ಷಾಸ್ನಾನ ಹೊಂದಿದ ವಿಶ್ವಾಸಿಗಳು, ಇತರರಿಗೆ ಸುರ್ವಾತೆ ಹೇಳುವ ಹೊಣೆಯನ್ನು ಹೊತ್ತರು.

ಕ್ರೈಸ್ತರಾದವರು ಆತ್ಮಗಳನ್ನು ಗೆಲ್ಲುವ ಕಾರ್ಯದಲ್ಲಿ ನಿರತಾಗಿರಬೇಕು, ಈ ದಿನಗಳ

ಅನೇಕ ಸಭೆಗಳಲ್ಲಿ ಈ ಅಭಿಲಾಷೆಯನ್ನು ಹೊಂದಿದವರನ್ನು ಕಾಣುವದಿಲ್ಲ. ಕರ್ತನಿಗಾಗಿ ಕಾರ್ಯ ನಿರ್ವಹಿಸದ ಸಭೆಗಳಲ್ಲಿ ದೊಡ್ಡ ಉದ್ಯೋಗ ಕೊರತೆಯಿದೆ. ಸಭೆಯ ಮಂಡಳಿಯಲ್ಲಿ ಲೋಕದ ಕ್ಷೀಣವಾದ ಚಿಂತನೆಯು ಉದ್ಭವಿಸಿರುತ್ತದೆ, ಅನೇಕ ಸದಸ್ಯರುಗಳು ಆತ್ಮೀಕ ಜೀವಿತಕ್ಕೆ ಇನ್ನೂ ಅವಲಂಭಿತರಾಗಿರುತ್ತಾರೆ. ಇತರರಿಗೆ ಸತ್ಯವನ್ನು ತಿಳಿಹೇಳುವ ವಿಚಾರದಲ್ಲಿ ತಿರಸ್ಕಾರ ತೋರುವವರಾಗಿದ್ದಾರೆ. ಸ್ನೇಹಿತನೊಂದಿಗೆ ಅಥವಾ ಪಕ್ಕದವನಿಗೆ ಸುವಾರ್ತೆ ಹೇಳಲು ಹಣ ಖರ್ಚು ಮಾಡುವ ಅಗತ್ಯವಿರುವದಿಲ್ಲ. ಹಾಗಿದ್ದರೂ ಇತರರ ಆತ್ಮಗಳನ್ನು ಗೆದ್ದುಕೊಳ್ಳಲು ಕ್ರೈಸ್ತರು ಸೋತವರಾಗಿದ್ದಾರೆ.

ಈ ದಿನಗಳಲ್ಲಿ ಕೆಲಸಕ್ಕೆ ಬಾರದ ಅನೇಕ ಕ್ರೈಸ್ತ ನಾಟಕಕಾರರು ವೇದಿಕೆಯ ಮೇಲೆ ಇದ್ದಾರೆ. ಹಿರಿಯರೇ: ನೀವು ಸೇವೆ ಮಾಡುತ್ತಾ ಇರುವ ಸಭೆಯು ಮಾತ್ರ ಅಪೊಸ್ತಲರ ಕೃತ್ಯಗಳು 2ರಲ್ಲಿರುವ ಯೆರೂಸಲೇಮಿನ ಸಭೆಯಂತಿದೆಯೇ? ಸುವಾರ್ತೆಯ ಕಾರ್ಯವನ್ನು ಮುಂದುವರಿಸಲು ಈ ವಿಧವಾದ ಸ್ಥಳೀಯ ಸಭೆಯು ಪ್ರಯತ್ನ ಮಾಡುವದಾದರೆ ಲೋಕ ದಲ್ಲಿ ಅನೇಕ ಜನರು ಕ್ರಿಸ್ತನ ಕುರಿತು ಕೇಳಲ್ಪಡುವರಲ್ಲವೇ? ನಿಮ್ಮ ಹಾಗೆ, ಸಭೆಯಲ್ಲಿರುವ ಪ್ರತಿಯೊಬ್ಬರು ಆತ್ಮಗಳನ್ನು ಗೆಲ್ಲುವದಾದರೆ? ಈ ವರ್ಷದಲ್ಲಿ ಕ್ರಿಸ್ತನಿಗಾಗಿ ಎಷ್ಟೋ ಆತ್ಮಗಳನ್ನು ಗೆಲ್ಲಬಹುದಲ್ಲವೇ?

ಪ್ರಸಂಗಿಗಳೇ: ಸಭೆಯಲ್ಲಿರುವ ಹಲವಾರು ಜನರು, ನೀವು ಆತ್ಮಗಳನ್ನು ಗೆಲ್ಲುವ ನಿದರ್ಶನವನ್ನು ಪಾಲಿಸುವದಾದರೆ, ಆರು ತಿಂಗಳ ಒಳಗಾಗಿ ಅನೇಕರನ್ನು ಕ್ರಿಸ್ತನಿಗಾಗಿ ದೀಕ್ಷಾಸ್ನಾನ ಮಾಡಿಸಬಹುದಲ್ಲವೇ?

ಮೇಲ್ವಿಚಾರಕರೇ (ಡೀಕನ್ಸ್): ಸ್ಥಳೀಯ ಸಭೆಗಾಗಿ ಈ ವರ್ಷ ನೀವು ಮಾಡಿರುವ ಹಲವಾರು ಕಾರ್ಯಗಳ ಪಟ್ಟಿಯನ್ನು ಮಾಡುವದಾದರೆ, ನಿಮ್ಮ ಈ ಕ್ರಿಯೆಗಳ ಪರಿಣಾಮವಾಗಿ ಎಷ್ಟು ಆತ್ಮಗಳು ನೇರವಾಗಿ ಮತ್ತು ಪರೋಕ್ಷವಾಗಿ ಕ್ರಿಸ್ತನ ಕಡೆಗೆ ಬಂದಿರಬಹುದು?

ಸಭಾಸದಸ್ಯರೆ: ನಿಮ್ಮ ಆತ್ಮೀಕ ತಾಪಮಾನದ ಮೀಟರ್‌ನಲ್ಲಿ, "ಪ್ರೀತಿ ಮತ್ತು ಚಿಂತನೆಯನ್ನು" ನೀವುಗಳು ಅಳತೆ ಮಾಡಬಹುದೇ? ಕಳೆದ ವರ್ಷದಲ್ಲಿ ನಾಶವಾದ ಆತ್ಮಗಳಿಗಾಗಿ, ಸುವಾರ್ತೆಯನ್ನು ಸಾರಲು ಮುಂದಾಗಬಹುದಿತ್ತಲ್ಲವೇ? ಅಥವಾ ನೀವು ಕೇವಲ ಒಂದು ಬೆಂಚಿನಲ್ಲಿ ಕೂತುಕೊಳ್ಳುವವರು, ಸಮಯವನ್ನು ಕಳೆಯುವ ಸದಸ್ಯರು, ಅಥವಾ ಶ್ರೋತೃಗಳಲ್ಲಿ ಕುಳಿತಿರುವ ಪ್ರೇಕ್ಷಕರೇ? ದೇವ ಜನರಿಂದ ದೊರೆತ ಅನ್ಯೋನ್ಯತೆಯನ್ನು ಆನಂದಿಸಿ, ಕರ್ತನ ಲಾಭಕ್ಕಾಗಿ ಯಾವ ಕಾರ್ಯವನ್ನು ಮಾಡಲಿಲ್ಲವೇ?

ಸಭೆಗಳೇ: ನೀವು "ಯೆರೂಸಲೇಮನ್ನು" (ನಿಮ್ಮ ಸಮಾಜ, ಪಟ್ಟಣ, ದೇಶ ರಾಜ್ಯ ಅಥವಾ ಸ್ಥಳೀಯವಾಗಿ) ಕ್ರಿಸ್ತನ ಉಪದೇಶದಿಂದ ತುಂಬಿಸಿರುವಿರಾ (ಅಪೊಸ್ತಲರ ಕೃತ್ಯಗಳು 5:28)? ಆದಿ ಕ್ರೈಸ್ತರು ಅದನ್ನು ಮಾಡಿದರು ಎಂದು ಅಪೊಸ್ತಲರ ಕೃತ್ಯಗಳು ದಾಖಲು ಮಾಡಿದೆ. ನೀವು ವಾಕ್ಯವನ್ನು ಸಾರದೆ ಇದ್ದರೆ, ಏಕೆ ಮಾಡಬಾರದು?

ಅನೇಕ ಸಭೆಗಳು "ದೇವ ವಾಕ್ಯವನ್ನು ಹಿಡುಕೊಂಡು" ನಿರರ್ಗಳವಾಗಿರುವರು, ಮತ್ತು "ನಂಬಿಕೆಯಲ್ಲಿ ನುರಿತವರು" ಎನ್ನುವರು. ಈ ಸಭೆಗಳವರು ಅಪೊಸ್ತಲರ ಕೃತ್ಯದ ಸಂದೇಶದ ಪ್ರಕಾರ, ಯೇಸುವಿಗಾಗಿ, ಸುವಾರ್ತೆಯಲ್ಲಿ ಏಕೆ ನುರಿತವರಾಗಬಾರದು.

ಆರಾಧನೆಗೆ ಸೇರಿಬರುವದು ಹಾಗೂ ಸಭೆಗೆ ಕೂಡಿ ಬರುವದೇ ಮುಖ್ಯವಾದ "ಸಭೆಯ ಕೆಲಸ" ಎಂದು ತಿಳಿದು ಅನೇಕರು ಮೂರ್ಖರಾಗಿರುವರು. ಅನೇಕ ಸ್ತ್ರೀ ಪುರುಷರು ತಾವು ಭಾನುವಾರ ಶಾಲೆಯಲ್ಲಿ ಬೋಧಿಸಿ, ಆರಾಧನೆಯಲ್ಲಿ ಸಹಾಯ ಮಾಡುವದೇ ಸಭೆಯ ಕೆಲಸವೆಂದು ತಿಳಿದಿರುವರು. ಅದು ಒಳ್ಳೆಯ ಚಟುವಟಿಕೆಯಾದರು, (ಸುವಾರ್ತೆಯ ಪ್ರಚಾರ) ಕಾರ್ಯವಾಗುವದಿಲ್ಲ. ಕೇವಲ ಆರಾಧನೆಗಾಗಿ ಕೂಡಿ ಬರುವದೇ ಸಭಾ ಕಾರ್ಯವಾಗಿರದೇ, ಪ್ರೀತಿ ಮತ್ತು ಉತ್ತಮ ಕಾರ್ಯಗಳನ್ನು ಪ್ರೇರಿಸುವ ಸ್ಥಳವಾಗಿರುತ್ತದೆ (ಇಬ್ರಿಯ 10:24, 25). "ಆ ಸಭೆಯು ಸತ್ಯಕ್ಕೆ ಸ್ತಂಭವು ಆಧಾರವು ಆಗಿರಬೇಕೆಂಬುದ್ದನ್ನು" ಸಾಧಿಸಿ ತೋರಿಸಬೇಕು

(1 ತಿಮೊಥೆ 3:15). ಆದರೆ ಅನೇಕ ಸಭೆಗಳು ಈ ದಿನಗಳಲ್ಲಿ "ಸತ್ಯದ ತಲೆದಿಂಬುಗಳಾಗಿವೆ; ಆದರೆ ಕೆಲಸದಲ್ಲಿರುವಾಗಲೇ ನಿದ್ರಿಸುವವರಾಗಿದ್ದಾರೆ." ಅವರು ಪ್ರಮುಖವಾದ "ಬಲದ ಸ್ತಂಭಗಳಾಗಬೇಕು," ಮತ್ತು ಈ ಬಲದಿಂದ ಲೋಕಕ್ಕೆಲ್ಲಾ ಸುವಾರ್ತೆಯನ್ನು ಸಾರಬೇಕು.

ಒಬ್ಬನು ಒಂದು ಕೈ ಗಡಿಯಾರವನ್ನು ಕೊಂಡು ತಂದಾಗ, ಅದು ಕಾರ್ಯ ನಿರ್ವಹಿಸದಿದ್ದರೆ, ಮುಂದೇನಾಗಬಹುದು? ಸಹಜವಾಗಿ ಆ ಮನುಷ್ಯನು ತನ್ನ ಕೈಗಡಿಯಾರ ಉಪಯೋಗಕ್ಕೆ ಬರುವದೋ ಅಥವಾ ಇಲ್ಲವೋ ಎಂದು ಪರಿಶೀಲಿಸುವನಲ್ಲವೇ. ಅನೇಕ ಸಾರಿ ಅದನ್ನು ದುರಸ್ತಿ ಮಾಡಿದರು, ಅದು ಸರಿಯಾದ ಸಮಯವನ್ನು ತೋರದೆ ಹೋದರೆ, ಅದನ್ನು ಎಸೆದು ಬಿಡಬೇಕಲ್ಲವೇ.

ಸುವಾರ್ತಾ ಕಾರ್ಯವನ್ನು ಸರಿಯಾಗಿ ನಿರ್ವಹಿಸದ ಸಭೆಗಳನ್ನು ಒಂದು ವೇಳೆ ದೇವರು ಈ ರೀತಿ ಮಾಡುವದಾದರೆ? ಆ ಕೈಗಡಿಯಾರಕ್ಕೆ ಆದ ಸಂಗತಿಯನೇ ದೇವರು ನಮ್ಮಲ್ಲಿ ಮಾಡುವವನಲ್ಲವೇ? ಸಭೆಯು ತಾನಿರುವ ಸಮುದಾಯದಲ್ಲಿ ಸುವಾರ್ತೆಯನ್ನು ಸಾರದೆ ಹೋದರೆ, ನ್ಯಾಯ ತೀರ್ಪಿನ ದಿವಸದಲ್ಲಿ ದೇವರು ಆ ಸಭೆಯನ್ನು ವಿಸರ್ಜಿಸುವನಲ್ಲವೇ. ಈ ಕಾರ್ಯಕ್ಕೆ ಸಭೆಯು ಹೊಣೆಯಾಗಿದೆ ಎಂಬುದನ್ನು ಒಬ್ಬನೂ ಮರೆಯಬಾರದು - ಉದಾಹರಣೆ: ಪ್ರಕಟಣೆ 1 ರಿಂದ 3ರಲ್ಲಿ ಆಸ್ಯ ಸೀಮೆಯ ಏಳು ಸಭೆಗಳೊಂದಿಗೆ ದೇವರು ಮಾತನಾಡಿದನು.

ಯಾವುದೇ ಸಭೆಗಳಿಗೆ, ದೇವರು ನೀಡಿರುವ ಪ್ರಮುಖವಾದ ಸೇವಾ ಹೊಣೆಗಾರಿಕೆ ಗಳೇನು? ನಾವು ನಮ್ಮ ಸಮುದಾಯದಲ್ಲೂ, ಲೋಕದ ಸುವಾರ್ತಾ ಕಾರ್ಯಗಳಿಗಾಗಿ ಯಾವ ವಿಧವಾದ ಕ್ರಮಗಳನ್ನು ವಹಿಸಿರುವೆವು ಎಂಬ ಆತ್ಮೀಕ ತಾಪಮಾನದ ಅಳತೆಯನ್ನು ಮಾಡುವ ಸಮಯವು ಇದಾಗಿದೆ.

ಒಂದು ಆತ್ಮಕ್ಕೆ ದೀಕ್ಷಾಸ್ನಾನ ಮಾಡಿಸುವದಕ್ಕೆ, ಸಭೆಯಲ್ಲಿ ಎಷ್ಟು ಜನರ ಅಗತ್ಯವಿದೆ ಎಂದು ಪರಿಶೀಲನೆ ಮಾಡೋಣ. ಕಳೆದ ಐದು ದಶವರ್ಷಗಳಲ್ಲಿ ಸಭೆಗಳಲ್ಲಿ ಶೇಕಡ 10/ ರಷ್ಟು ಹೆಚ್ಚಳವಾಗಿದೆ, ಅಂದರೆ ಶೇಕಡ 10/ ರಷ್ಟು ಜನರನ್ನು ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಬೇಕು. (ಉದಾಹರಣೆ ಅಮೇರಿಕೆಯಲ್ಲಿ 300 ಜನರನ್ನು ಹೊಂದಿರುವ ಒಂದು ಸಭೆಯು, ಒಂದು ವರ್ಷದಲ್ಲಿ 30 ಜನರಿಗೆ ದೀಕ್ಷಾಸ್ನಾನ ಮಾಡಿಸುತ್ತದೆ.) ಹಾಗೂ ಚಿಕ್ಕ ಮಕ್ಕಳು ಬೆಳೆದು ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಿರುವದರಿಂದ, ಸಮುದಾಯದ ಜನರು ಪಾಪಕ್ಕಾಗಿ ಮಾನಸಾಂತರ ಪಟ್ಟು, ತಮ್ಮ ಕೆಟ್ಟತನವನ್ನು ಬಿಟ್ಟು ದೇವರ ಕಡೆಗೆ ಬರುವವರ ಸಂಖ್ಯೆಯು ಶೇಕಡ 10/ ರಲ್ಲಿ ಒಳಗೊಂಡಿರುವದಿಲ್ಲ. ದೇವ ಸಭೆಯಲ್ಲಿ ಇರುವ ಮಕ್ಕಳಿಗೆ ದೇವ ಭಕ್ತಿಯನ್ನು ಬೋಧಿಸುವದು ಸ್ವಾಗತಾರ್ಹವೆ, ಆದರೆ ಇಂತಹ ಮುಂದಗತಿಯಾದ ಸುವಾರ್ತಾ ಬೆಳವಣಿಗೆಯು, ಸಭೆಯಲ್ಲಿನ ಬಲಹೀನತೆಯನ್ನು ಎತ್ತಿ ತೋರಿಸುತ್ತದಲ್ಲವೇ.

ಇಂತಹ ಸಭೆಗಳು ತಮ್ಮಲ್ಲಿರುವ ತಲಾಂತುಗಳನ್ನು ಹೂಣಿಟ್ಟು, ಧೈರ್ಯವಾಗಿ ಸುವಾರ್ತೆ ಸಾರುವದಕ್ಕೆ ಭಯಗೊಂಡಿರುವರಲ್ಲವೇ. ಅಮೇರಿಕೆಯಲ್ಲಿನ ಸಭೆಗಳಲ್ಲಿ, ಸುವಾರ್ತಾ ಪರಿಣಾಮವಾಗಿ ಬೋಧಿಸಿ, "ಹೊರಗಿನವರನ್ನು" ಕ್ರಿಸ್ತನಿಗೆ ದೀಕ್ಷಾಸ್ನಾನ ಮಾಡಿಸುವ ವಿಚಾರದಲ್ಲಿ ಇರುವ ಫಲಿತಾಂಶವನ್ನು ನೋಡುವದಾದರೆ ದಿಗ್ಭ್ರಮೆ ಉಂಟಾಗುತ್ತದೆ ಆದ್ದರಿಂದ ಒಂದು ಸಭೆ ಒಂದು ನೂರು ಜನರಿಗೆ ದೀಕ್ಷಾಸ್ನಾನ ಮಾಡಿಸಿದರೆ, ಅದರಲ್ಲಿ ಸಭೆಯವನ್ನು ಹೊರತುಪಡಿಸಿ, ಹೊರಗಿನವರ ಶೇಕಡವಾರನ್ನು ಪರಿಶೀಲಿಸಿದರೆ, ಅದರಲ್ಲಿ ಅವರ ಮಕ್ಕಳ ಶೇಕಡವಾರು ಹೆಚ್ಚಾಗಿರುತ್ತದೆ. ಅದು ಅವಮಾನಕರವೂ ಆಗಿದೆ. ಅದನ್ನು ಶೇಕಡ 10/ ಎಂದು ತಿಳಿದರು ಅಲ್ಲಿ ಎಷ್ಟು ದೀಕ್ಷಾಸ್ನಾಗಳಾಗಿವೆ ಎಂದು ಆಲೋಚಿಸಿ!

## ಮುಕ್ತಾಯ

ಅಪೊಸ್ತಲರ ಕೃತ್ಯಗಳು ಕ್ರಿಯೆಗಾಗಿ ದೇವರ ಕರೆಯಾಗಿದೆ. ಮೊದಲ ಶತಮಾನದ

ಅಪೊಸ್ತಲರು ಹೊಂದಿದ್ದ ಪ್ರತಿಕ್ರಿಯೆಯ ದಾಖಲು ಅದರಲ್ಲಿರುತ್ತದೆ, ಹಾಗೂ ಆತನ ಶಿಷ್ಯರುಗಳ ಮಾಡಬೇಕಾದ ಕ್ರಿಯೆಗಳಿಗೆ, ನಿಗದಿ ಮಾಡಿದ ಸಮಯವೂ ಆಗಿರುವದಿಲ್ಲ.

ಊಹೆ ಮಾಡುವ ಹಾಗೂ ಧೈರ್ಯ ಇರುವ ದೇವ ಜನರ ಅಗತ್ಯವು ಇರುತ್ತದೆ. ಸಮರ್ಪಿತರಾದ ಜನರ ಅಗತ್ಯವು ದೇವರಿಗಿದೆ, ಹಾಗೂ ನಿಶ್ಚಲರು, ಸಾಹಸಿಗರೂ ಆದವರ ಅಗತ್ಯವಿದೆ. ಲೌಕೀಕ ಸಂಗತಿಗಳಿಗೆ ಆಕರ್ಷರಾಗದ ಶಿಷ್ಯರ ಅಗತ್ಯವಿದೆ. ಆತ್ಮೀಕ ವಿಚಾರಗಳಿಗೆ ಆಧ್ಯತೆ ನೀಡಿರುವವರನ್ನು ಯೇಸು ಬಯಸುತ್ತಾನೆ. ಪರಲೋಕ ಭಾವದವರು ಆತನಿಗೆ ಅಗತ್ಯವಿದೆ.

ಅಪೊಸ್ತಲರ ಕೃತ್ಯವು ಅಪಾಯದ ಸೂಚನೆ ನೀಡಲು ಬೆಳಗುತ್ತಿರುವ ದೀಪದಂತಿದೆ, ಮೊದಲ ಶತಮಾನಲ್ಲಿದ್ದ ಕ್ರೈಸ್ತರ ಶಕ್ತಿ, ಕ್ರಿಯೆ, ತಿಳುವಳಿಕೆ, ಅವಿರತ ಯತ್ನ ಹಾಗು ಧೈರ್ಯದ ಬೆಳಕಾಗಿತ್ತು. ಒಂದು ವೇಳೆ ಯೇಸು ಈ ಭೂಮಿಯಲ್ಲಿ ಈಗ ಇರುತ್ತಿದ್ದರೆ, ಆತನು ಸಹ ಇದನ್ನೆ ಮಾಡುತ್ತಿದ್ದನು, ಕೇಳುವವರಿಗೆಲ್ಲ ನಿರೀಕ್ಷೆ ಹಾಗೂ ರಕ್ಷಣೆಯನ್ನು ತರುತ್ತಿದ್ದನು. "ಆತನು ದೇವರ ಬಲಗೈಯಿಂದ ಉನ್ನತಸ್ಥಾನಕ್ಕೆ ಏರಿಸಲ್ಪಟ್ಟನು" (ಅಪೊಸ್ತಲರ ಕೃತ್ಯಗಳು 2:33), ಈಗ ಆತನ ಮಕ್ಕಳು, ತಾನು ಮಾಡಿದ ಕೃತ್ಯಗಳನ್ನು ಸಾಧಿಸಬೇಕೆಂದು ಬಯಸುತ್ತಾನೆ. ಪ್ರತಿ ಶತಮಾನದಲ್ಲೂ, ಸುವಾರ್ತೆ ಸಾರುವ, ಆತ್ಮಗಳನ್ನು ಗೆಲ್ಲುವ ಪ್ರತಿಶತಮಾನದ ಪ್ರತಿಯೊಬ್ಬರಿಗೂ ಕೃಪೆಯ ಸುವಾರ್ತೆಯನ್ನು ಹೇಳುವ ಸಭೆಗಳಲ್ಲಿ ಆತನು ತನ್ನ ವಿಶ್ವಾಸವನ್ನು ಇರಿಸಿದ್ದಾನೆ.

ಯೇಸು ಕ್ರಿಸ್ತನು ಪರಲೋಕಕ್ಕೆ ಏರಿ ಹೋಗುವ ಮೊದಲು, ತನ್ನ ಶಿಷ್ಯರಿಗೆ ನೀಡಿದ ಸೇವಾ ಮಹಾ ಆದೇಶವನ್ನು ಅವರುಗಳು ಪಾಲಿಸಿದಾಗ, ಅದರಲ್ಲಿ ಉಂಟಾದ ಪರಿಣಾಮಗಳ ದಾಖಲೆಯೇ ಅಪೊಸ್ತಲರ ಕೃತ್ಯಗಳಾಗಿವೆ (ಮತ್ತಾಯ 28:18-20; ಮಾರ್ಕ 16:15, 16; ಲೂಕ 24:44-47). ಆದ್ದರಿಂದ, ಇದನ್ನು ಓದುತ್ತಿರುವ ಯಾವುದೇ ತಲೆ ಮಾರಿನವರಾಗಿರಲಿ, ಯೇಸು ಅವರಿಂದ ಬಯಸಿರುವದನ್ನು ಅರಿತುಕೊಳ್ಳಬಹುದು. ಅದು *ಸರಳವಾದದ್ದಾಗಿದೆ.* ಈಗ ಏನು ಮಾಡಬೇಕೆಂಬ ವಿಚಾರವು ಕಷ್ಟಕರವಾಗಿರುವದಿಲ್ಲ: ಹೋಗಿರಿ, ಉಪದೇಶಿಸಿರಿ, ಎಲ್ಲಡೆ ಹೋಗಬೇಕೆಂಬದು *ಸರಳವಾಗಿದೆ*: ಸಕಲ ಜನಾಂಗಗಳಿಗೂ ಏನನ್ನೂ ಪ್ರಸಂಗಿಸಬೇಕೆಂದು *ಸರಳವಾಗಿದೆ*: ಮಾನಸಾಂತರದ ಹಾಗೂ ಪಾಪಪರಿಹಾರದ ಸುವಾರ್ತೆ ಯಾರನ್ನು ಸಂಧಿಸಬೇಕು ಎಂಬುದು *ಸರಳವಾಗಿದೆ*: ಪ್ರತಿಯೊಬ್ಬರಿಗೂ ವಿಶ್ವಾಸಿಗಳು ಏನು ಮಾಡಬೇಕೆಂದು ಕಷ್ಟಕರವಲ್ಲ. *ಅವರು ಕ್ರಿಸ್ತನಿಗೆ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು*: ಪರಿವರ್ತನೆಗೊಂಡವರು *ಮುಂದೇನು ಮಾಡಬೇಕೆಂಬುದು ಕಷ್ಟಕರವಲ್ಲ:* ಯೇಸು ನೀಡಿರುವ ಆದೇಶಗಳನ್ನು ಪಾಲಿಸಬೇಕು.

ಅಪೊಸ್ತಲರ ಕೃತ್ಯದ ಸಂದೇಶವನ್ನು ಸ್ಪಷ್ಟವಾಗಿ ಕೇಳಿಕೊಳ್ಳೋಣ: ಕ್ರಿಸ್ತನಿಗೆ ಸೇರಿದವರು ದೇವರ ಕೃತ್ಯಗಳನ್ನು ಪರಿಪಾಲಿಸುವ ಕರೆಯಾಗಿದೆ.